ಶ್ರೀ ಬಿ.ಎಸ್. ಯಡಿಯೂರಪ್ಪ:— ಮಾನ್ಯ ಅಧ್ಯಕ್ಷರೇ, ತಾವು ಈಗ ತಾನೇ ಹೇಳಿದ್ದೀರಿ, ಇದಕ್ಕೆ ಸಂಬಂಧಪಟ್ಟ ಸಚಿವರಾದ ಮೀರಾಜುದ್ದೀನ್ ಎನ್. ಪಾಟೀಲರು ಇಲ್ಲಿ ಇಲ್ಲ. ಈ ರೀತಿಯಾದರೆ ಹೇಗೆ?

ಅಧ್ಯಕ್ಷರು :— ಅವರು ನನಗೆ ಬರೆದು ತಿಳಿಸಿದ್ದಾರೆ. ಕೌನ್ಸಿಲ್‌ನಲ್ಲಿ ಅವರದ್ದು ಯಾವುದೋ ಬಿಸಿನೆಸ್ ಇದೆ ಎಂದು ತಿಳಿಸಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ :— ನಾನು ಅಲ್ಲೆ ಹೋಗಿ ನೋಡಿಕೊಂಡು ಬಂದು ನಿಮಗೆ ರಿಪೋರ್ಟ್ ಮಾಡುತ್ತೇನೆ.

ಅಧ್ಯಕ್ಷರು:— ನಾನು ಯಾರನ್ನೂ ರಕ್ಷಿಸುವುದು ಅಥವಾ ಹಿಡಿದುಕೊಂಡುವುದನ್ನು ಮಾಡುವುದಿಲ್ಲ, ನನ್ನಲ್ಲಿ ಸುಮಾರು ಚೀಟಿಗಳಿವೆ. ಈಗ ಅನಂತನಾಗ್‌ರವರು ಒಂದು ಪತ್ರವನ್ನು ಕಳುಹಿಸಿದ್ದಾರೆ. ಅದನ್ನೂ ಇಲ್ಲಿ ಇಟ್ಟುಕೊಂಡಿದ್ದೇನೆ. ಅವರಿಗೆ ಸಂಬಂಧಿಸಿದ ವಿಷಯ ಬಂದಾಗ ರೆಫರ್ ಮಾಡಿ ಹೇಳಲು ಒಬ್ಬೊಬ್ಬರು ಕಳುಹಿಸಿದ ಪತ್ರಗಳನ್ನೂ ಸಾಧ್ಯವಾದಷ್ಟು ಮಟ್ಟಿಗೆ ಇಟ್ಟುಕೊಂಡಿರುತ್ತೇನೆ. ಮಿರಾಜುದ್ದೀನ್ ಅವರು ನನಗೆ ಬರೆದು ಕಳುಹಿಸಿದ್ದಾರೆ.

ಶ್ರೀ ಡಿ.ವಿ. ಸದಾನಂದಗೌಡ :— ಅಲ್ಲಿ ಸ್ಟ್ರೈಕ್ ಕೂಡ ನಡೆಯುತ್ತಿದೆ. ಆದುದ್ದರಿಂದ ದಯವಿಟ್ಟು ನಾಳೆಯಾದರೂ ಉತ್ತರ ಕೊಟ್ಟರೆ ಒಳೆಯದು.

ಶ್ರೀ ಎಂ.ಸಿ. ನಾಣಯ್ಯ :— ಮಾಹಿತಿಯನ್ನು ತರಿಸಿ ನಿಮಗೆ ಉತ್ತರವನ್ನು ನಾಳೆ ಅಥವಾ ನಾಡಿದ್ದು ಕೊಡುತ್ತೇವೆ.

(ಊ) ವಿಟ್ಲನಗರ ಪಂಚಾಯಿತಿ ಪ್ರದೇಶದಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿರುವ ಬಗ್ಗೆ.

ಶ್ರೀ ಎ. ರಕ್ಮಯ್ಯ ಪೂಜಾರಿ (ವಿಟ್ಲ) :— ಮಾನ್ಯ ಅಧ್ಯಕ್ಷರೇ ನಮ್ಮ ನಗರ ಪಂಚಾಯಿತಿಯ ಪ್ರದೇಶದ ಒಳಗಿರುವ ಜನರಿಗೆ ಕುಡಿಯುವ ನೀರಿಗಾಗಿ ಸುಮಾರು ನಾಲ್ಕು ಕೋಟಿ ರೂಪಾಯಿಗಳ ಒಂದು ಪ್ರಾಂತ್ಯ ಯೋಜನೆ ಕಾರ್ಯಗತವಾಗಿ ಕಳೆದ ವರ್ಷ ಪೂರ್ತಿ ಕೆಲಸವಾಗಿ ಉದ್ಘಾಟನೆ ಮಾಡಿ ಪಂಚಾಯಿತಿಗೆ ಕೊಡಲಾಗಿದೆ. ಆದರೆ ಆ ಪ್ರದೇಶದ ಮೂರನೇ ಒಂದು ಪ್ರದೇಶದ ಜನರಿಗೂ ಇದರಿಂದ ಪ್ರಯೋಜನವಾಗುತ್ತಿಲ್ಲ. ಅಷ್ಟೇ ಅಲ್ಲ, ಅಲ್ಲಿ ಅದಂಥ ಕೆಲಸಗಳಿಗೂ ಕೂಡ ಕಳಪೆ ಕಾಮಗಾರಿಗಳು. ಈ ಕಳಪೆ ಕಾಮಗಾರಿಗಳಿಂದಾಗಿ ಆಗಾಗ ನೀರಿನ ಪೈಪೂ ಕೂಡ ಒಡೆದು ಹೋಗಿ ಆ ಪ್ರದೇಶದ ಜನರಿಗೆ ನೀರು ಕೊಡಲು ಆಗುವುದಿಲ್ಲ. ಆದಕ್ಕಾಗಿ ನಾನು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ, ಆ ಪ್ರದೇಶದ ಎಲ್ಲಾ ಜನರಿಗೆ ನೀರು ಕೊಡುವ ಹಾಗೆ ಮಾಡಬೇಕು

ಮತ್ತು ಒಳ್ಳೆಯ ಕಾಮಗಾರಿ ಕೆಲಸ ಮಾಡಿ ಎಲ್ಲರಿಗೂ ನೀರು ಸಿಗುವ ವ್ಯವಸ್ಥೆ ಮಾಡಬೇಕು ಎಂದು ಸರ್ಕಾರವನ್ನು ಒತ್ತಾಯಿಸುತ್ತೇನೆ. ಅದಕ್ಕಿಂತ ಮುಖ್ಯವಾಗಿ ಪೊಣಂಕಾಪು. ಮೊಲ್ಲಮಜಲು, ಕಲ್ಲಗುಡ್ಡೆ, ಅಂದರಬೆಟ್ಟು, ಕಾಮಾಜೆ, ಮೈರನಪಾಡ, ಬೋಳಂಗಡಿ, ಬೊಂಡಾಲ, ಶಾಂತಿಗುಡ್ಡೆ, ಉಪ್ಪುಗುಡ್ಡೆ, ಬಂಗ್ಲೆಗುಡ್ಡೆ ಇತ್ಯಾದಿ ಪ್ರದೇಶಗಳಲ್ಲಿ ಕುಡಿಯಲು ನೀರಿಲ್ಲ. ಇಲ್ಲಿ ಕುಡಿಯುವ ನೀರಿನ ದೊಡ್ಡ ಸಮಸ್ಯೆ ಇದೆ. ಈ ಎಲ್ಲಾ ಪ್ರದೇಶಗಳಿಗೂ ಕೂಡ ಇದನ್ನು ವಿಸ್ತರಣೆ ಮಾಡಬೇಕು ಎಂದು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಎಂ.ಎಸ್. ಪಾಟೀಲ್ (ನಗರಾಭಿವೃದ್ಧಿ ಸಚಿವರು) :— ಈ ನೋಟೀಸ್ ಈಗ ನನಗೆ ಬಂದಿದೆ. ಅದರ ವಿಚಾರವನ್ನು ತಿಳಿದುಕೊಂಡು, ಸನ್ಮಾನ್ಯ ಸದಸ್ಯರನ್ನೂ ಕರೆಸಿ ಎಂ.ಡಿಯವರ ಜೊತೆಯಲ್ಲಿ ಮಾತನಾಡಿ, ಇದರ ಬಗ್ಗೆ ಪರಿಹಾರವನ್ನು ಕಲ್ಪಿಸಿಕೊಡುತ್ತೇನೆ.

(ಎ) *ಮೈಸೂರು ನಗರದಲ್ಲಿ ಗೋಪಾಲಕೃಷ್ಣ ಎನ್ನುವರ ಮೇಲೆ ಸುಳ್ಳು ಎಸ್‌ಐಟಿ ದಾಖಲು.*

ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ) :— ಸನ್ಮಾನ್ಯ ಸಭಾಧ್ಯಕ್ಷರೇ, ಕೇಂದ್ರ ಸರ್ಕಾರದ ಅನುಮತಿಯನ್ನು ಪಡೆದು ಮೈಸೂರು ನಗರದಲ್ಲಿ ಗೋಪಾಲಕೃಷ್ಣ ಎನ್ನುವವರು ಸಂಪೂರ್ಣ ಪ್ಲಾಂಟೇಷನ್ ಎನ್ನುವ ಒಂದು ಕಛೇರಿಯನ್ನು ತೆರೆದಿದ್ದಾರೆ. ಅವರಿಗೆ ಮಂಡಿಮೊಹಲ್ಲಾ ಸರ್ಕಲ್ ಇನ್ಸ್‌ಪೆಕ್ಟರ್ ಆದ ನಾಗರಾಜ್ ಎನ್ನುವವರು, ಬಲವಂತವಾಗಿ ನೀನು ಈ ಕಛೇರಿಯನ್ನು ಮುಚ್ಚಬೇಕು ಎಂದು ಒತ್ತಾಯ ತಂದರು. ಅದಕ್ಕೆ ಅವರು ಲೈಸನ್ಸ್ ಅನ್ನು ತೋರಿಸಿದ್ದಕ್ಕೆ ಅವರು, ನೀವು ಅಂಗಡಿ ಮುಚ್ಚಲಿಲ್ಲ ಎಂದರೆ ನಿನ್ನ ಮೇಲೆ ಕೊಲೆ ಕೇಸ್ ಹಾಕುತ್ತೇನೆ ಅಥವಾ ಗಂಧದ ಮರದ ತುಂಡನ್ನು ಇಟ್ಟು ಕಳ್ಳಸಾಗಾಣಿಕೆಯ ಕೇಸ್ ಹಾಕುತ್ತೇನೆ ಎಂದು ಹೆದರಿಸಿ, ಕೊನೆಗೆ ಎಸ್‌ಐಟಿ ಸುಳ್ಳು ಕೇಸನ್ನು ದಾಖಲು ಮಾಡಿ, ಅವರ ಮೇಲೆ, ಅವರ ಮೇಲೆ ಸುಳ್ಳು ಕೇಸನ್ನು ಹಾಕಿದ್ದಾರೆ. ಇದನ್ನು ನಾನು ಸನ್ಮಾನ್ಯ ಗೃಹ ಮಂತ್ರಿಗಳ ಮತ್ತು ಡಿ.ಜಿ.ಯವರ ಗಮನಕ್ಕೆ ತಂದಾಗ, ಅವರು ಬೆಂಗಳೂರಿನಿಂದ ಒಬ್ಬ ಐ.ಜಿಯವರನ್ನು ನೇಮಕ ಮಾಡಿ ವಿಚಾರಣೆ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದರು. ಆದ್ದರಿಂದ ಆ ವಿಚಾರಣೆ ಏನಾಯಿತು, ಏನು ಕ್ರಮ ಜರುಗಿಸಿದರು ಎನ್ನುವ ಬಗ್ಗೆ ಸರ್ಕಾರದವರಿಂದ ಉತ್ತರವನ್ನು ಬಯಸುತ್ತಿದ್ದೇನೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ಮಾನ್ಯ ಅಧ್ಯಕ್ಷರೇ, ನಿಮ್ಮಲ್ಲಿ ನಾನು ಒಂದು ವಿಷಯವನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಕೆಲವು ಸಂದರ್ಭಗಳಲ್ಲಿ, ಶೂನ್ಯವೇಳೆಯಲ್ಲಿ ಎತ್ತುವಂಥ ಪ್ರಸ್ತಾವಗಳನ್ನು ಆ ದಿವಸವೇ ಕೊಡುತ್ತಾರೆ. ಆಗ ಅದು ಸಂಬಂಧಪಟ್ಟ ಮಂತ್ರಿಗಳಿಗೆ ಹೋಗಿರುವುದಿಲ್ಲ. ಒಂದು ದಿನದ ಮುಂಚೆ ನೋಟೀಸ್ ಕೊಟ್ಟರೆ, ಆಗ ಮಾಹಿತಿಯನ್ನು ತರಿಸಲು ಸಾಧ್ಯವಾಗುತ್ತದೆ.